# <u>ವೆಂಕಟೇಶ ಬೇಡಿಕೊಂಬೆ ಕೃಪೆಯ ಪಾಲಿಸೋ</u>

1. **Ref.:** Shri Purandara Dasara Sahitya Part – 1, Pooja Tatva, edited by Shri Betageri Krishna Sharma and Shri Bengeri Huchha Rayaru, page No. 98.
2. **Ref.:** Purandara Sahitya Darshana, Samputa 1, Jeevana Darshana edited by Prof. S.K. Ramachandra Rao, page No. 291.
3. **Ref.:** Dasara Padagalu – Purandara Dasara Keerthane, Samyukta Samputa, Edited by Shri Pavanje Gururao, Sriman Madhwa Siddantha Granthalaya, Udupi, page No. 522.
4. **Note:** The lyrics mainly are as per Ref. 2. They are given without highlights. The lyrics, given in yellow highlights, are as per Ref. 1. The wordings in Ref. 3 are same as in Ref. 2.
5. **Note:** Singer has followed lyrics as in Ref. 2 and Ref. 3.
6. **Note:** The Ankita are different in these books. We have considered Ref.1 as standard and taken that Ankita for listing.

ರಾಗ ಆರಭಿ                    ತಾಳ ರೂಪಕ

ವೆಂಕಟೇಶ ಬೇಡಿಕೊಂಬೆ ಕೃಪೆಯ ಪಾಲಿಸೋ ಬ್ರಹ್ಮ
ಶಂಕರಾದಿ ವಂದ್ಯ ಎನಗೆ ಮುಕ್ತಿ ತೋರಿಸೋ ॥ ಪ ॥

(ಹುಟ್ಟು) ನಷ್ಟ ಮೊದಲಾದಂಥ ಕಷ್ಟ ಬಿಡಿಸೋ ನಿನ್ನ
ಪಟ್ಟದ ರಾಣಿಗೆ ಹೇಳಿ ಪದವಿ ಕೊಡಿಸೋ
ಇಷ್ಟ ಭಕ್ತ ಜನರೊಳು ಎನ್ನ ಸೇರಿಸೋ ಈ
ಸೃಷ್ಟಿಯೊಳು ನಿನ್ನ ದಾಸರ ದಾಸನೆನಿಸೋ ॥ 1 ॥

(ಅಟ್ಟು) ಉಟ್ಟು ಉಂಡು ಮಿಕ್ಕಿದ್ದೆಲ್ಲ ಎನಗೆ ಹಾಕಿಸೋ, ಪೊಂ-
ಬಟ್ಟಲೊಳಗಿನ ಹಾಲು ಉಚ್ಚಿಷ್ಟ (ಎನಗೆ) ಹಾಕಿಸೋ
(ಗಟ್ಟಿ) ಘಟ್ಯಾಗಿ ಸಕ್ಕರೆ ತುಪ್ಪ ರೊಟ್ಟಿ ಉಣ್ಣಿಸೋ, ಮುಂದೆ
(ಬಾಹ ಜನ್ಮಂಗಳ) ಹುಟ್ಟಿ ಬಹ ಜನ್ಮಂಗಳ ಎನಗೆ ಬಿಡಿಸೋ ॥ 2 ॥

ಕಿಟ್ಟಗಟ್ಟಿದ ಕಬ್ಬಿಣಕ್ಕೆ ಪುಟವ ಹಾಕಿಸೋ, ಉ-

ತ್ಕೃಷ್ಟ ಬಂಗಾರದೊಳು ಎನ್ನ ಸೇರಿಸೋ (ಕೂಡಿಸೊ)
ಬೊಟ್ಟಿಗೆ ಉಂಗುರ ಮಾಡಿ ಎನ್ನ ಧರಿಸೋ, ಸ್ವಾಮಿ (ಸೇರಿಸೋ)
ದಿಟ್ಟ ಪುರಂದರ (ವಿಠಲನೆಂಬುದನೆ) ವಿಠಲನೆ ದಯದಿ ಪಾಲಿಸೋ ॥ 3 ॥

**ಕಠಿಣ ಪದಗಳ ಅರ್ಥ ಮತ್ತು ಟಿಪ್ಪಣಿಗಳು:**

**ಪಟ್ಟದ ರಾಣಿಗೆ** – ಲಕ್ಷ್ಮಿಗೆ,

**ಉಚ್ಛಿಷ್ಟ** – ಎಂಜಲು, ದೇವರ ಪ್ರಸಾದ

**ಅಟ್ಟು** (ಧಾತು) = ಅಟ್ಟಿಸು, ಒಣದಾಗು, ಗಟ್ಟಿಯಾಗು, ಹಸಿಯಾಗು, ಬೇಯು, ಅಡಿಗೆಮಾಡು, ಎಟಕು, ನಿಲುಕು

**ಅಟ್ಟು** (ನಾಮ) = ಹೊಂದಿಕೊಂಡಿರುವುದು, ಸಾಮಿಪ್ಯ, ಬಾಂಧವ್ಯ

**ಪೊಂಬಟ್ಟಲು** – ದೇವರಿಗೆ ಎಡೆ ಇಡಲು ಬಳಸುವ ಬಂಗಾರದ ಪಾತ್ರೆ

**ಹುಟ್ಟಿ ಬಹ** – ಹುಟ್ಟಿ ಬರುವ, ಮುಂದೆ ಬರಬಹುದಾದ

**ಹುಟ್ಟಿ ಬಾಹ ಜನ್ಮಂಗಳ** = ಪೂರ್ವ ಜನ್ಮಗಳನ್ನು

**ಕಿಟ್ಟಗಟ್ಟಿದ** – ಕಿಲುಬು ಕಟ್ಟಿದ

**ಕಿಟ್ಟಗಟ್ಟಿದ ಕಬ್ಬಿಣಕ್ಕೆ ಪುಟವ ಹಾಕಿಸೋ** = ಅಜ್ಞಾನದಿಂದ ದೂಷಿತವಾದ ಜೀವವನ್ನು ಶುದ್ಧಗೊಳಿಸು

**ಉತ್ಕೃಷ್ಟ ಬಂಗಾರದೊಳು ಎನ್ನ ಕೂಡಿಸೊ** = ಜ್ಞಾನಿಗಳಲ್ಲಿ ನನ್ನನ್ನು ಕೂಡಿಸು

**ದಿಟ್ಟ ಪುರಂದರ ವಿಠಲನೆಂಬುದನೆ** = ನಿನ್ನ ನಾಮ ಸ್ಮರಣೆಯನ್ನೇ (ಈ ನುಡಿಯ ಮೊದಲಿನ ಮೂರು ಚರಣಗಳಲ್ಲಿ ಪ್ರತಿಮಾಲಂಕಾರವಿದೆ)

**Classification:** Keerthane
**Ankita:** purandara vittala
**Location:** Tirupati
**Category:** Srinivasa Stuti, pooja tatva.

**Sub-Category:** srinivasa, brahma, janma, huttu, daya, uchhista, shiva, mukti, arasi, jana, oota, halu, sakkare, tuppa, bangara, ungura, daya,

**Pravachana:** NA

**Explanation:** NA